ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

ಹಿಂದುಳಿದ ವರ್ಗಗಳ ಮೀಸಲಾತಿ ಮತ್ತು ಪ್ರಾತಿನಿಧ್ಯದ ಬಗ್ಗೆ

ಶ್ರೀ ಕೆ. ಪಿ. ನಂಜುಂಡಿ ವಿಶ್ವಕರ್ಮ(ವಿಧಾನ ಸಭೆಯಿಂದ ಚುನಾಯಿತರಾದವರು) –

64 (56) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ ಒಂದರಲ್ಲಿ 95 ಜಾತಿಗಳಿದ್ದು ಈ ಜಾತಿಗಳಿಗೆ ಕೇವಲ 4% ಮೀಸಲಾತಿ ಇದ್ದು ಪ್ರವರ್ಗ 2(ಕಿ) ನಲ್ಲಿ 102 ಜಾತಿಗಳಿವೆ ಇಲ್ಲಿ 15% ಮೀಸಲಾತಿ ಇದೆ ಈ ಎರಡೂ ಪ್ರವರ್ಗಗಳಲ್ಲಿರುವ ಜಾತಿಗಳ ವ್ಯತ್ಯಾಸ ಕೇವಲ ಏಳು(7) ಆದರೆ ಮೀಸಲಾತಿಯಲ್ಲಿನ ವ್ಯತ್ಯಾಸ ಇರುವುದಕ್ಕೆ ಕಾರಣ ಏನು: ಇದಕ್ಕೆ ಇರುವ ಮಾನದಂಡ ಏನು;

(ಆ) ಪ್ರವರ್ಗ 2(ಕಿ) ನಲ್ಲಿ 102 ಜಾತಿಗಳಿದ್ದು 15% ಮೀಸಲಾತಿ ಇದ್ದು 25 ವರ್ಷಗಳಲ್ಲಿ ಇಲ್ಲಿರುವ 102 ಜಾತಿಗಳಲ್ಲಿ ಯಾವ ಯಾವ ಜಾತಿಗೆ ಎಷ್ಟೆಷ್ಟು ಹುದ್ದೆ ಸಿಕ್ಕಿವೆ; (ವಿವರ ನೀಡುವುದು)

(ಇ) ಕೆ.ಪಿ.ಎಸ್.ಸಿ. ಯಲ್ಲಿ ಈವರೆಗೂ ಪ್ರವರ್ಗ 2(ಕಿ) ನಲ್ಲಿ ಯಾವ ಯಾವ ಜಾತಿಗೆ ಎಷ್ಟೆಷ್ಟು ಪ್ರಾತನಿಧ್ಯ ಸಿಕ್ಕಿದೆ (ವಿವರ ನೀಡುವುದು)

(ಈ) ದೇವರಾಜ ಅರಸು ಅಭಿವೃದ್ಧಿ ನಿಗಮದಲ್ಲಿ ಕಳೆದ ಹತ್ತು ವರ್ಷಗಳಿಂದ ಯಾವ ಯಾವ ಜಾತಿಗಳಿಗೆ ಎಷ್ಟೆಷ್ಟು ಸಾಲ, ಸಬ್ಸಿಡಿ, ನೆರವು ಮತ್ತು ತರಬೇತಿ ನೀಡಲಾಗಿದೆ? (ವಿವರ ನೀಡುವುದು)